# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:11.05.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ವೆಂಕಟೇಶ್ (ಕಾರ್ಯಪಾಲಕ ಅಭಿಯಂತರರು, ಟಿವಿಸಿಸಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ವೆಂಕಟೇಶ್ | ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು |
| 3 | ಡಾ|| ರಮ್ಯ | ವೈದ್ಯಾಧಿಕಾರಿಗಳು |
| 4 | ಕಿರಣ್ ಕುಮಾರ್ | ವೈದ್ಯಾಧಿಕಾರಿಗಳು |
| 5 | ಶ್ರೀ ರಮೇಶ್ | ಹಿ. ಆ. ಪ. |
| 6 | ಶ್ರೀ ಸೋಮಶೇಖರ್ | ಕಿ. ಆ. ಪ. |
| 7 | ರಂಗರಾಜು | ಬೆಸ್ಕಾಂ |
| 8 | ಶ್ರೀ ಮಂಜುನಾಥ್ ಬಿ.ಎಸ್. | ವಾಲ್ವಮ್ಯಾನ್, ಬಿಡಬ್ಲ್ಯೂಎಸ್ಎಸ್‌ಬಿ |
| 9 | ಭೈರವಿ | ವಾರ್ಡ್ ಮಾರ್ಷಲ್ |
| 10 | ರಾಜು | ಮಾರ್ಷಲ್ |
| | ಹಾಗೂ ಇತರೆ ಸಾರ್ವಜನಿಕರು ಹಾಜರಿದ್ದರು | |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

### 1. ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ:-

ಗೋಕುಲ ಬಸ್ ನಿಲ್ದಾಣದ ರಸ್ತೆಯಲ್ಲಿರುವ ಮ್ಯಾನ್‌ಹೋಲ್ ಬ್ಲಾಕ್ ಸಮಸ್ಯೆ ಕಂಡುಬರುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಇದನ್ನು ಸರಿಪಡಿಸಲಾಗಿದೆ ಎಂದು ಸಂಬಂಧಪಟ್ಟ ಬಿಡಬ್ಲ್ಯೂಎಸ್ಎಸ್‌ಬಿ ಸಹಾಯಕ ಅಭಿಯಂತರರು ತಿಳಿಸಿದರು.

### 2) ಪ್ರಾಥಮಿಕ ಆರೋಗ್ಯ ಕೇಂದ್ರ:

ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಲಸಿಕಾ ಶಿಬಿರಗಳನ್ನು ಏರ್ಪಡಿಸಿ. ನಾಲ್ಕನೇ ಅಲೆಯ ಆತಂಕದಲ್ಲಿದ್ದು, ಆದ್ದರಿಂದ 1ನೇ ಡೋಸ್ ಹಾಕಿಸಿಕೊಳ್ಳದ ಕೆಲವೊಬ್ಬ ಸಾರ್ವಜನಿಕರಿಗೆ ಹಾಗೂ 2ನೇ ಡೋಸ್‌ನ್ನು ಹಾಕಿಸಿಕೊಳ್ಳದವರಿಗೆ ಅರಿವು ಮೂಡಿಸಬೇಕೆಂದು ವೈದ್ಯಾಧಿಕಾರಿಗಳಿಗೆ ತಿಳಿಸಿದರು.

3) ಬೆಸ್ಕಾಂ :

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೋವಿಡ್ ಆಸ್ಪತ್ರೆ, ಜನ್ ಔಷಧ, ವಾರ್ಡ್ ಕಛೇರಿಗಳ ಬಿಲ್ಲುಗಳನ್ನು ಪಾವತಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಕಿರಿಯ ಅಭಿಯಂತರರು ತಿಳಿಸಿದರು. ಅದರಂತೆ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದರು.

4) ಮಾಸ್ಕ್ ಹಾಕದಿರುವ ವ್ಯಕ್ತಿಗಳಿಗೆ ದಂಡ ವಿಧಿಸುವ ಬಗ್ಗೆ:-

ಅಧ್ಯಕ್ಷರು ಮಾತನಾಡಿ, ವಾರ್ಡ್‌ನಲ್ಲಿ ಮಾರ್ಷಲ್‌ಗಳು ಈಗಾಗಲೇ ಮಾಸ್ಕ್ ಹಾಕದ ಸಾರ್ವಜನಿಕರರಿಗೆ ಸರ್ಕಾರದ ಆದೇಶದ ರೀತ್ಯಾ ದಂಡ ಹಾಕುತ್ತಿದ್ದು, ಅದರ ಜೊತೆ ನಾಲ್ಕನೇ ಅಲೆಯ ಹಿನ್ನೆಲೆಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಮಾರ್ಷಲ್‌ಗಳಿಗೆ ಸೂಚಿಸಲಾಯಿತು.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು, ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುವಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವೆಂಕಟೇಶ್)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:17

ಮುಖ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:17